(ಶ್ರೀ ಬಿ. ವೈ. ನೀಲೇಗೌಡ.)

ಸ್ವಾಮಿ, ನಮ್ಮ ಪಾಂಡವಪುರ ತಾಲ್ಲೂಕಿನಲ್ಲಿ ಒಟ್ಟು 175 ಹಳ್ಳಿಗಳಿವೆ. ಅವುಗಳಲ್ಲಿ 36 ಹಳ್ಳಿಗಳಿಗೆ ಮಾತ್ರ ನಾಲೆಯಿಂದ ನೀರು ಒದಗಿಸಲ್ಪಡುತ್ತಿದೆ. ಉಳಿದ ಹಳ್ಳಿಗಳಲ್ಲಿ ಒಟ್ಟು ಇರತಕ್ಕ 75 ಸಾವಿರ ಎಕರೆ ಜಮೀನಿನಲ್ಲಿ 8,600 ಎಕರೆ ಮಾತ್ರ ತರೀ ಜಮೀನು, ಉಳಿದದ್ದೆಲ್ಲಾ ಖುಷ್ಕಿ ಆಗಿದೆ. ಅನೇಕ ವೇಳೆ ಮಾನ್ಯ ಮಂತ್ರಿಗಳೂ ಕೂಡ ಒಪ್ಪಿಕೊಂಡಿದ್ದಾರೆ, ಈ ಪ್ರದೇಶ ಕ್ಷಾಮ ಪರಿಸ್ಥಿತಿಗೂ ಕೂಡ ಸಿಕ್ಕಿ ಜನಗಳು ತುಂಬಾ ನೊಂದು-ಬೆಂದಿದ್ದಾರೆ. ಇಲ್ಲಿ ಸುಮಾರು 15-20 ಸಣ್ಣಪುಟ್ಟ ಕೆರೆಗಳು ಇವೆ. ಈ ಕೆರೆಗಳು ಒಡೆದು ಹೋಗಿ ಸುಮಾರು 30-40 ವರ್ಷಗಳಾಗಿವೆ. ಅಲ್ಲಿಂದೆಲೂ ಕೂಡ ರೈತರು ಅನೇಕ ವಿಧವಾಗಿ ಸರ್ಕಾರದವರಿಗೆ ಮನವಿಮಾಡಿಕೊಂಡಿದ್ದಾರೆ. ಆದರೂ ಸಹ ಸರ್ಕಾರದವರಾಗಲಿ, ಸಂಬಂಧಪಟ್ಟ ಅಧಿಕಾರಿಗಳಾಗಲಿ ಒಂಭು ಕೆರೆಯನ್ನು ಕೂಡ ಜೀರ್ಣೋದ್ಧಾರ ಮಾಡಲಿಕ್ಕೆ ಪ್ರಯತ್ನಮಾಡಿಲ್ಲ. ಈ ವಿಚಾರದಲ್ಲಿ ನಾನು ಸರ್ಕಾರವನ್ನು ದುರುದ್ದೇಶದಿಂದ ಟೀಕಿಸುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ. ಒಂದು ಮಾತಿನಲ್ಲಿ ಹೇಳುವುದಾದರೆ, ಮೈಸೂರು ಸರ್ಕಾರದ ಮರಾಮತ್ತು ಇಲಾಖೆಯಲ್ಲಿ ದಕ್ಷರಾದ ಅಧಿಕಾರಿಗಳು ಇದ್ದಾರೆ. ಅದು ನಿಜ. ಹಾಗಿದ್ದೂ ಸಹ ನೀರಿಲ್ಲದೆ ಹಾಹಾಕಾರ ಪಡುತ್ತಿರುವಾಗ ಏಕ ಒಂದು ಕೆರೆಯು ಕೂಡ ಜೀರ್ಣೋದ್ಧಾರವಾಗಿಲ್ಲ ಎಂಬುದಕ್ಕೆ ಅವರು ಒಂದು ಸಮಜಾಯಿಷಿ ಕೊಡುತ್ತಾರೆ ಎಂದು ಹೇಳಿ ನಾನು ನಂಬಿದ್ದೇನೆ. ಈ ವಿಷಯದಲ್ಲಿ ನಾನು ಮಂತ್ರಿಗಳಲ್ಲೂ ಸಹ ಪದೇ ಪದೇ ತಿಳಿಸಿದ್ದೇನೆ. ತಿಳಿಸಿ, ತಿಳಿಸಿ, ನನಗೇ ಬೇಜಾರು ಆಗಿದೆ. ನನಗೇ ಬೇಜಾರಾಗಿರಬೇಕಾದರೆ ಅವರಿಗೆ ಇನ್ನೂ ಹೆಚ್ಚು ಬೇಜಾರಾಗಿರಬಹುದು. ಆ ಪ್ರದೇಶದಲ್ಲಿ ಮತ್ತೆ ನೀರನ್ನು ಕಾಣುವಂತೆ ಮಾಡ ಬೇಕೆಂದು ತಮ್ಮ ಮುಖೇನ ಅವರಲ್ಲಿ ಈ ಮನವಿಯನ್ನು ಮಾಡಿಕೊಳ್ಳುತ್ತೇನೆ. ನಾನು ಸಂಬಂಧಪಟ್ಟ ಅಧಿಕಾರಿಗಳನ್ನು ವಿಚಾರಿಸಿದ್ದರಲ್ಲಿ ಈ 10-15 ಕೆರೆಗಳ ಜೀರ್ಣೋದ್ಧಾರಕ್ಕೆ ಒಂದು ಲಕ್ಷ ರೂಪಾಯಿ ಖರ್ಚು ಮಾಡಿದರೆ ಸುಮಾರು 1½-2 ಸಾವಿರ ಎಕರೆಗೆಳವರೆಗೂ ತರೀ ಜಮೀನು ಸಾಗುವಳಿಯಾಗುತ್ತದೆ ಎಂದು ತಿಳಿದು ಬಂದಿದೆ. ಈಗ ಏನಾಗಿದೆ ಎಂದರೆ ನೀರು ಕೆರೆಗಳಿಗೆ ಬರುವುದಿಲ್ಲ, ಖುಷ್ಕಿ ಬೆಳೆ ತೆಗೆಯುವುದಕ್ಕೆ ಅವಕಾಶ ಎಲ್ಲ, ಕಂದಾಯ ರೆಮಿಷ್ಷ ಕೊಡಬೇಕಾದರೆ ಅರ್ಧ ಕಂದಾಯ ಎಲ್ಲಾ ಕೊಟ್ಟಾದಮೇಲೆ ರೆಮಿಷ್ಷ ಕೊಡುತ್ತೀರಿ. ಅದು ಅವನು ಕೊಟ್ಟಿರತಕ್ಕ ಬಡ್ಡಿಗಿಂತ ಜಾಸ್ತಿ ಆಗುವುದಿಲ್ಲ. ಆದ್ದರಿಂದ ಈ ವರ್ಷವೇ ಆದಷ್ಟು ಜಾಗ್ರತೆ ಒಂದಷ್ಟು ಹಣ ಖರ್ಚುಮಾಡಿ ಕೆರೆಗಳನ್ನು ಜೀರ್ಣೋದ್ಧಾರಗೊಳಿಸಿ ಜನಗಳಿಗೆ ಉಪಕಾರಮಾಡಿ ಕೀರ್ತಿಪಡೆಯಿರಿ ಎಂದು ತಮ್ಮ ಮುಖೇನ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಸ್ವಾಮಿ, ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀವರ್ಮಾ ನೀಲೇಗೌಡರು ಸರ್ಕಾರವನ್ನು ದುರುದ್ದೇಶದಿಂದ ಟೀಕೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ ಎಂದು ಹೇಳಿದರು. ಅವರು ನನ್ನ ಗಮನಕ್ಕೆ ಎರಡು ಅಥವಾ ಒಂದು ಕೆರೆಯ ವಿಚಾರವನ್ನು ತಂದು ಪ್ರಸ್ತಾಪಮಾಡಿದರು. ಕೆರೆಗಳು ಜೋಡೀ ಗ್ರಾಮಗಳಲ್ಲಿ ಇವೆ. ಜೋಡೀದಾರರು ಕಾಂಟ್ರಿಬ್ಯೂಷ್ಷ ಕೊಡುವುದಿಲ್ಲ. ರೈತರು ಒಪ್ಪಿದರೆ ಜೋಡಿದಾರರು ಒಪ್ಪುವುದಿಲ್ಲ, ಜೋಡಿದಾರರು ಒಪ್ಪಿದರೆ ರೈತರು ಒಪ್ಪುವುದಿಲ್ಲ, ಇಂಥ ಪರಿಸ್ಥಿತಿ ಅಲ್ಲಿ ಇದೆ. ಸಾಧ್ಯವಾದಷ್ಟು ಕೂಡ ಜಾಗ್ರತೆ ಈ ವಿಚಾರದಲ್ಲಿ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಮಾನ್ಯ ಸದಸ್ಯರಿಗೆ ಭರವಸೆ ಕೊಡಬಲ್ಲೆ.

ಶ್ರೀ ಬಿ. ವೈ. ನೀಲೇಗೌಡ.—ಪಾಪಸು ತೆಗೆದು ಕೊಳ್ಳಲಿಕ್ಕೆ ಸಭೆಯ ಅಪ್ಪಣೆ ಬೇಡುತ್ತೇನೆ.

The cut motion was, by leave, withdrawn.

Mr. SPEAKER.—Sri Sivappa has got three cut motions (40, 41 and 42). He may select one of them.

Sri G. SIVAPPA (Holalkere).—I will move the first one, Sir, Sl. No. 40.

Constructing Feeder Channel from Magadi Halla to Kunigali and Hulimalali Tanks in Holalkere Taluk.

Sri G. SIVAPPA.—Sir, I beg to move:

> "That the Demand under the head '19. Construction of Irrigation, Navigation, Embankment and Drainage Works for Rs. 16,89,000 be reduced by Rs. 100 (to raise a discussion on the need for constructing a Feeder Channel from Magadi Halla to Kunigali and Hulimalali tanks in Holalkere Taluk)."

ಸ್ವಾಮಿ, ಮೊದಲನೆಯದಾಗಿ ಇತರ ಎಲ್ಲಾ ಜಿಲ್ಲೆಯವರಿಗೂ ಇದ್ದಂತೆ ನಮಗೂ ಇರತಕ್ಕ ಅನಾನು ಕೂಲಗಳು ಬೇಕಾದಷ್ಟು ಇವೆ. ಅದರಲ್ಲೂ ನಮ್ಮ ಜಿಲ್ಲೆಯವರು ಕ್ಷಾಮ ಪ್ರದೇಶದಲ್ಲಿರತಕ್ಕವರು ಎಂಬುದೂ ಸಹ ತಮಗೆ ಗೊತ್ತಿರತಕ್ಕ ವಿಚಾರ. ಈಗ ಏನಾಗಿದೆ ಎಂದರೆ ಕೆರೆಗಳನ್ನು ಕಟ್ಟಿಸಿಕೊಡಬೇಕೆಂದು ಕೇಳಿದ ಮೇಲೆ ಕೆಲವು ಕೆರೆಗಳನ್ನು ಕಟ್ಟಿಸಿ ಕೊಟ್ಟು ಅವು ಒಡೆದುಹೋಗಿ ಏನೂ ಇಲ್ಲದ ಹಾಗೆ ಆಗಿದೆ. ಈಗ ನಾನು ಕೇಳಿರತಕ್ಕ ವಿಚಾರ ಏನು ಎಂದರೆ: Constructing a Feeder Channel from Magadi Halla to the tank of Kunigali and Hulimalali in Holalkere Taluk. ಇದು ಬಹಳ ದಿವಸದಿಂದ ಪೆಂಡಿಂಗ್ ಆಗಿದೆ. ನಾನು ಈ ದಿವಸ ಹೇಳಬೇಕೆಂದರೆ, ಹಿಂದೆ ನಮ್ಮ ಕಡೆ ಕೆಲವು ಜನರು 'ಶ್ರೀವರ್ಮಾ ಸಿದ್ದಪ್ಪನವರು ಇದ್ದಾರೆ, ಅವರಲ್ಲಿ ಹೇಳಿ ಎಲ್ಲಾ ಮಾಡಿಸಿಬಿಡುತ್ತೇವೆ' ಎಂದು ಹೇಳಿ ಇಲ್ಲಿಗೆ ಬರುತ್ತಿದ್ದರು. ಅದಾದ ಮೇಲೆ ತಾವು ಬಂದಿರಿ; ಆಗ 'ನಮ್ಮ ಮಂತ್ರಿಗಳು ಸಿದ್ದಯ್ಯನವರು ಇದ್ದಾರೆ, ಅವರಿಗೆಲ್ಲಾ ಹೇಳಿ ಈ ಕೆಲಸಮಾಡಿಕೊಂಡು ಬರುತ್ತೇವೆ' ಎಂದು ಹೇಳಿ ಇಲ್ಲಿಗೆ ಬರುತ್ತಿದ್ದರು. ಇಲ್ಲಿಗೆ ಬಂದು ಅದೇನು ಮಾಡುತ್ತಿದ್ದರೋ ಏನೋ ಅಂತೂ ಈಗ ಆ ಕೆಲಸ ಆಗದೆ ಹೋಗಿರುವುದರಿಂದ ತಾವು ಏನಾದರೂ ಮಾಡಿ ಇದನ್ನು ಮಾಡಿಸಿಕೊಡಬೇಕು. ಬಹಳ ದಿವಸದಿಂದ ಪೆಂಡಿಂಗ್ ಆಗಿದೆ. ಮೊನ್ನೆ ಡೆಪ್ಯುಟಿ ಕಮೀಷನರನ್ನು ನಾವು ನೋಡಿದ್ದಾಗ ರಿಲೀಫ್ ವರ್ಕ್ಸ್‌ನಲ್ಲಿ ಸ್ಯಾಂಕ್ಷ್ಷ

ಮಾಡಿಸುತ್ತೇವೆ, 10 ಸಾವಿರ ರೂಪಾಯಿ ಕೆಲಸ ಮಾಡಬೇಕೆಂದು ಇದೆ. ಸರಿಯಾದ ಕಡೆ ಜಾಗ ತೋರಿಸಿ ಎಂದು ಹೇಳಿದರು. ಮೂರು ಕಡೆ ಜಾಗ ತೋರಿಸಿದರೂ ಯಾವ ಕಡೆಯೂ ಕೆಲಸ ಪ್ರಾರಂಭವಾಗಿಲ್ಲ. ಇದು ಬಹಳ ಅತ್ಯವಶ್ಯಕವಾಗಿ ಆಗಬೇಕಾದ ಕೆಲಸ. ಈ ಚಾನಲ್‌ಮಾಡುವುದರಿಂದ ಎರಡು ಕೆರೆಗಳಿಗೂ ಅನುಕೂಲವಾಗುತ್ತದೆ ಎಂಬುದನ್ನು ಗಮನಿಸಬೇಕು.

ಎರಡನೆಯದಾಗಿ ತಾವು ಬಜೆಟ್ಟಿನ ಪಾಲ್ಯುಂ I, ಪುಟ 344 ಸ್ವಲ್ಪ ನೋಡಬೇಕು. ಇಲ್ಲಿ ಏನಾಗಿದೆ ಎಂದರೆ, Construction of a new tank near Bharmanayakanadurga—Budget Estimate for 1954-55—Rs. 5,000—Works connected with food production drive ಎಂದು ಹೇಳಿ ಬಿಟ್ಟಿರಿ. ನನಗೆ ಗೊತ್ತಿರುವಂತೆ ಭರ್ಮನಾಯಕನ ದುರ್ಗ ಎನ್ನುವುದು ಹೊಳಲ್ಕೆರೆ ತಾಲ್ಲೂಕಿನಲ್ಲಿ ಇದೆ. ಇಲ್ಲಿ ತಾವು ಪ್ರಿಂಟ್ ಮಾಡಿರುವುದು Davangere Division, Hosadurga ಎಂದು. ಇದು ಯಾವುದು ಎಂದು ಕೇಳುತ್ತೇನೆ. ಹೊನದುರ್ಗ ತಾಲ್ಲೂಕಿನಲ್ಲಿ ಭರ್ಮನಾಯಕನ ದುರ್ಗ ಎಂದು ಇದೆಯೇ ಎಂದು ಅಮಲ್ದಾರರನ್ನು ವಿಚಾರಿಸಿದೆ. ಮತ್ತೆ ಇನ್ನೂ ಯಾರು ಯಾರನ್ನೋ ವಿಚಾರಿಸಿ, ಎಲ್ಲರೂ ಕೂಡ ಇಲ್ಲ ಎಂತಲೇ ಹೇಳಿದರು. ಇದು ಏನು ಎಂಬುದನ್ನು ವಿಚಾರಿಸಬೇಕೆಂದು ಹೇಳುತ್ತೇನೆ. ಇದನ್ನು ತಾವು ಪರಾಮರ್ಶಿಸಬೇಕೆಂದು ಹೇಳಿ ಚೀಫ್ ಇಂಜಿನಿಯರ ಗಮನಕ್ಕೆ ತಂದೆ. ಭರ್ಮನಾಯಕನ ದುರ್ಗದಲ್ಲಿ ಒಂದು ಕೆರೆ ಆಗಬೇಕೆಂದು ಕೇಳುತ್ತಾ ಇದ್ದಾರೆ. ಎಸ್ಟಿಮೇಟು ಇತ್ಯಾದಿಗಳನ್ನು ಮಾಡಿದ್ದಾರೆ. ಅದು ಹೊಳಲ್ಕೆರೆಗೆ ಸೇರಿದ್ದೋ ಇರಬೇಕು ಎಂದು ತಿಳಿದುಕೊಂಡಿದ್ದೇನೆ. Clerical mistake ಆಗಿದ್ದರೂ ಆಗಿರಬಹುದು.

Mr. SPEAKER.—The Hon'ble Member is adopting a new technique so that by moving one cut motion, he is trying to bring the subject matter of the other two cut motions also. He may confine himself to the subject matter of the cut motion No. 40. He should not create bad precedents.

ಶ್ರೀ ಜಿ. ಶಿವಪ್ಪ.—ಒಟ್ಟಿನಲ್ಲಿ ನಾನು ಸೂಚನೆ ಮಾಡಿರತಕ್ಕ ಎಲ್ಲಾ ವಿಚಾರಗಳನ್ನು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—Cut motion moved:

"That this demand be reduced by Rs. 100."

ಶ್ರೀ ಕಡಿದಾಳ್ ಮಂಜಪ್ಪ.—ಶ್ರೀಮಾನ್ ಶಿವಪ್ಪನವರು ಹೇಳಿದ ಸಕಲ ವಿಷಯಗಳನ್ನೂ ಕೂಡ ಸರ್ಕಾರದವರು ಗಮನದಲ್ಲಿಟ್ಟುಕೊಂಡು ಬಹಳ ಸಹಾನುಭೂತಿಯಿಂದ ಪರಿಶೀಲಿಸಿ ಕಾರ್ಯಕ್ರಮ ಕೈಗೊಳ್ಳುತ್ತಾರೆಂದು ಶಿವಪ್ಪನವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಭರವಸೆಯ ಆಧಾರದ ಮೇಲೆ ಅವರು ಈ ಪ್ರೋತಾನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

Sri G. SIVAPPA.—I seek leave to withdraw my cut motion.

The cut motion was, by leave, withdrawn.

Construction of a feeder channel to Alagud Tank.

Sri S. SRINIVASA IYENGAR (T.-Narasipur).—Sir, I move:

"That the demand under the head '19. Construction of Irrigation, Navigation, Embankment and Drainage Works' for Rs. 16,89,000 be reduced by Rs. 100 (in order to impress on Government the necessity of undertaking the construction of a feederchannel to Alagud tank in T.-Narasipur Taluk, Mysore District)."

Sir, the Alagud tank is a major tank situated in T.-Narasipur taluk. I had moved similiar cut motions in the previous years and the Government were pleased to say that they would undertake the construction of a feeder channel, but still the work has not yet been commenced. The tank has an *atchkat* of 400 acres and with the improvement of the channel, I believe, we can have an *atchkat* of 500 to 600 acres. All these years the raiyats are paying wet assessment without raising crop. The tank has not been full for a number of years and only this year the tank was full, but it was full at a time when the *atchkatdars* could not undertake irrigational activity. The Hon'ble Minister for Public Works was pleased to visit this place last year and the Chief Engineer inspected the place, but I do not know whether any estimate has reached the Government. I request, therefore, that the necessary estimate may be obtained as early as possible and sanction accorded.

Mr. SPEAKER.—Cut motion moved:

"That the demand be reduced by Rs. 100."

Sri Kadidal MANJAPPA (Minister for Revenue and Public Works).—Sir, the matter is being investigated. I may tell the Hon'ble Member that the estimate is under preparation. We will take early steps to finalise the matter.